



# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 136 | Pages. 2 | Date: 30-03-2025, SUNDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 136 - ಪುಟಗಳು : 2 - 30 ಮಾರ್ಚ್ 2025 ಭಾನುವಾರ | Ph: 8762954248 | ದರ : ₹1


## ಐಪಿಎಲ್ ಬೆಟ್ಟಿಂಗ್ ಸುಳಿಗೆ ಸಿಲುಕದಿರಿ

### ಜಿಲ್ಲೆಯ ಯುವಕರಿಗೆ ಸಂಸದರ ಮನವಿ | ಬದುಕಿಗೆ ಒಳ್ಳೆಯ ದಾರಿ ಆರಿಸಿಕೊಳ್ಳಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ದೇಶಾದ್ಯಂತ ಐಪಿಎಲ್ ಜ್ವರ ಶುರುವಾಗಿದ್ದು ಯುವಕರು ಬೆಟ್ಟಿಂಗ್ ಸುಳಿಗೆ ಸಿಲುಕಿ ಸಮಸ್ಯೆ ಮಾಡಿಕೊಳ್ಳಬಾರದು ಎಂದು ಸಂಸದ ಶ್ರೇಯಸ್ ಪಟೇಲ್ ಮನವಿ ಮಾಡಿದ್ದಾರೆ.



ಐಪಿಎಲ್ ಪಂದ್ಯಾವಳಿ ಶುರುವಾಗಿದೆ. ಬೆಟ್ಟಿಂಗ್ ಸಮಾಜಕ್ಕೆ ಮಾರಣಾಂತಿಕ ಅಪರಾಧ. ಯುವಕರು ಹಣ ಗಳಿಸುವ ಆಸೆಯಿಂದ ಬೆಟ್ಟಿಂಗ್ ಭೂತಕ್ಕೆ ಬಲಿಯಾಗುವುದು ಬೇಡ. ಒಳ್ಳೆಯ ಜೀವನಕ್ಕೆ ಬೇರೆಯದೆ ಮಾರ್ಗಗಳಿದ್ದು ಅದನ್ನು ಅನುಸರಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಆರಂಭದಲ್ಲಿ ಬೆಟ್ಟಿಂಗ್‌ನಿಂದ ಲಾಭ ಕಾಣಬಹುದು. ಆದರೆ ಹವ್ಯಾಸ ಚಟವಾಗಿ ಮಾರ್ಪಾಡಾದಾಗ ಚಿನ್ನ, ಮನೆ, ನಿವೇಶನ ಅಥವಾ ಆಸ್ತಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಕ್ರಿಕೆಟ್ ಬೆಟ್ಟಿಂಗ್‌ನಿಂದ ಅನೇಕ ಕುಟುಂಬಗಳು ದಿಕ್ಕಾಪಾಲಾಗಿವೆ. ಸಾಲ ತೀರಿಸಲಾಗದೆ ಬೇರೆ ರೀತಿಯ ಅಪರಾಧಗಳಲ್ಲಿ ತೊಡಗುತ್ತಾರೆ. ಆದ್ದರಿಂದ ಯಾರೂ ಮೋಸಕ್ಕೆ ಬಲಿಯಾಗಬೇಡಿ ಎಂದು ಅವರು ಕೋರಿದ್ದಾರೆ.




### ಆತ್ಮಹತ್ಯೆ ಮಾಡಿಕೊಂಡಿದ್ದ ವ್ಯಕ್ತಿ

ತಾಲ್ಲೂಕಿನ ಅಟ್ಟಾವರ ಗ್ರಾಮದ ಸ್ವರೂಪ್ (40) ಎಂಬ ವ್ಯಕ್ತಿ ಶುಕ್ರವಾರಷ್ಟೇ ಜೀವ ಕಳೆದುಕೊಂಡಿದ್ದಾನೆ. ಅಪಘಾತದಲ್ಲಿ ಗಾಯಗೊಂಡಿದ್ದಾಗ ಬಂದಿದ್ದ ಪರಿಹಾರ ಹಣವನ್ನು ಬೆಟ್ಟಿಂಗ್‌ಗೆ ಹಾಕಿ ವಾಪಸ್ ಹಣ ಬಾರದ ಹಿನ್ನೆಲೆಯಲ್ಲಿ ವಿಷ ಸೇವಿಸಿ ಜೀವನನ್ನೇ ತ್ಯಜಿಸಿದ್ದಾನೆ. ಇಂತಹ ಅವಘಡಗಳು ಜಿಲ್ಲೆಯಲ್ಲಿ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕಿದೆ.

### ಗ್ರಾಮಗಳಲ್ಲೂ ತಲೆ ಎತ್ತಿದ ಅಕ್ರಮ ಕೂಟ

ಬೆಟ್ಟಿಂಗ್ ದಂಧೆ ಜಿಲ್ಲೆಯಲ್ಲಿ ವ್ಯಾಪಕವಾಗಿ ಬೇರು ಬಿಟ್ಟಿದ್ದು, ಮುಂಬೈ, ಕೋಲ್ಕತ್ತಾ ಮತ್ತಿತರ ಭಾಗದ ಸಂಪರ್ಕ ಹೊಂದಿರುವ ಕಿಂಗ್‌ಪಿನ್‌ಗಳು ಸ್ಥಳೀಯ ಬುಕ್ಕಿಗಳು, ಆನ್‌ಲೈನ್ ಆ್ಯಪ್, ವಾಟ್ಸ್‌ಆ್ಯಪ್ ಮೂಲಕ ಯುವಕರು, ವಿದ್ಯಾರ್ಥಿಗಳು, ಸರ್ಕಾರಿ ನೌಕರರಿಗೆ ಬಲೆ ಬೀಸಿ ಬೆಟ್ಟಿಂಗ್ ದಂಧೆಗೆ ಎಳೆದು ತರಲಾಗುತ್ತಿದೆ.

ಒಂದು ಮ್ಯಾಚ್‌ಗೆ ಕೋಟಿಗಟ್ಟಲೇ ಹಣ ಕಟ್ಟಲಾಗುತ್ತಿದೆ. ತಮ್ಮ ನೆಚ್ಚಿನ ತಂಡ ಗೆದ್ದರೆ ಸಾವಿರಕ್ಕೆ ಮೂರರಿಂದ ಐದು ಸಾವಿರ ರೂ., ಸೋತರೆ ನಷ್ಟ ಹೀಗೆ ಒಪ್ಪಂದ ಮಾಡಿಕೊಂಡು ಲಕ್ಷಾಂತರ ರೂ. ವಿನಿಯೋಗಿಸುತ್ತಿದ್ದಾರೆ. ಈ ದಂಧೆಯಲ್ಲಿ ನಿರುದ್ಯೋಗಿ, ವ್ಯಾಪಾರಿ, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಿಗೂಢ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ವ್ಯವಹಾರ ಕುದುರಿಸಲಾಗುತ್ತಿದೆ.

ಕ್ರಿಕೆಟ್ ಬೆಟ್ಟಿಂಗ್‌ಗೆ ಸಂಬಂಧಪಟ್ಟಂತೆ ಹಲವು ಆ್ಯಪ್‌ಗಳು ಲಭ್ಯವಿದ್ದು, ಅವುಗಳನ್ನು ಬಳಸಿಕೊಂಡು ಆನ್‌ಲೈನ್ ಮೂಲಕ ಹಲವರು ಬೆಟ್ಟಿಂಗ್ ಕಟ್ಟುತ್ತಿದ್ದಾರೆ. ಆದರೆ, ಜಿಲ್ಲೆಯ ಹಲವರು ಮಧ್ಯವರ್ತಿಗಳನ್ನು ಮುಂದಿಟ್ಟುಕೊಂಡು ಬೆಟ್ಟಿಂಗ್ ಕಟ್ಟುತ್ತಿದ್ದಾರೆ.

ಕೆಲ ಗ್ರಾಮಗಳಲ್ಲಿ, ಯುವಕರು ತಮ್ಮದೇ ಅಕ್ರಮ ಕೂಟ ರಚಿಸಿಕೊಂಡು ಬೆಟ್ಟಿಂಗ್ ಆಡಿಸುತ್ತಿರುವ ಮಾಹಿತಿಯೂ ಹರಿದಾಡುತ್ತಿದೆ. ಇಂಥ ಬೆಟ್ಟಿಂಗ್ ದಂಧೆಯನ್ನು ಮಟ್ಟ ಹಾಕಲು ಪೊಲೀಸರು ಚುರುಕಿನ ಕಾರ್ಯಾಚರಣೆ ನಡೆಸಬೇಕಿದೆ.

## ಅಕ್ರಮ ಮರಳು ದಂಧೆ ಅವ್ಯಾಹತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಾಜ್ಯ ಸರ್ಕಾರದ ಮರಳು ನೀತಿ ಜಾರಿಯಲ್ಲಿದ್ದರೂ ಜಿಲ್ಲೆಯಲ್ಲಿ ಅಕ್ರಮ ಮರಳು ದಂಧೆ ಅವ್ಯಾಹತವಾಗಿ ನಡೆಯುತ್ತಿದೆ.

ಹೇಮಾವತಿ ನದಿಯ ಒಡಲನ್ನೇ ಬಗೆದು, ಹಗಲು-ರಾತ್ರಿ ಎನ್ನದೆ ಮರಳನ್ನು ತೆಗೆದು ಸಾಗಿಸುತ್ತಿರುವ ದಂಧೆಕೋರರಿಗೆ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಕಣ್ಮುಚ್ಚಿ ಕುಳಿತಿರುವುದು ವರದಂತಾಗಿದೆ.

ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆ, ಕಿತ್ತನಕೆರೆ, ಕಿತ್ತಗಳ್ಳಲೆ, ಬಿಗತ್ತೂರು ಹಾಗೂ ಸಕಲೇಶಪುರ ತಾಲ್ಲೂಕಿನ ವಡೂರು, ಯಸಳೂರು ಪ್ರದೇಶಗಳಲ್ಲಿ ಈ ಅಕ್ರಮ ಚಟುವಟಿಕೆ ಜೋರಾಗಿ ನಡೆಯುತ್ತಿದೆ.

ದಂಧೆಕೋರರು ಯಾವುದೇ ಭಯವಿಲ್ಲದೆ ಮರಳನ್ನು ತೆಗೆದು ಸಾಗಾಣಿಕೆ ಮಾಡುತ್ತಿದ್ದಾರೆ. ನದಿಪಾತ್ರದಲ್ಲಿ ಓಡಾಡಿದರೆ ಸಾಕು ಅಕ್ರಮವಾಗಿ ಗಣಿಗಾರಿಕೆ ನಡೆಸಿ ತೆಗೆದಿರುವ ಮರಳು ದಾಸ್ತಾನು ಕಣ್ಣಿಗೆ ಬೀಳುತ್ತದೆ. ಇದಕ್ಕೆ ಕೆಲವು ಸ್ಥಳೀಯ ಅಧಿಕಾರಿಗಳ ಕುಮ್ಮಕ್ಕು ಇದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಈ ಅಕ್ರಮ ಮರಳು ದಂಧೆಯಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗುತ್ತಿದ್ದರೂ, ಪೊಲೀಸ್ ಹಾಗೂ ಗಣಿಗಾರಿಕೆ ಇಲಾಖೆಗಳು ಕಡಿವಾಣ ಹಾಕುವ ಬದಲು ಕುಂಭ ಕರ್ಣನಂತೆ ನಿದ್ರಿಸುತ್ತಿವೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದರ ಜತೆಗೆ, ಅಕ್ರಮ ಚಟುವಟಿಕೆಯನ್ನು ಪ್ರಶ್ನಿಸುವವರ ಮೇಲೆ ದಂಧೆಕೋರರು ಹಲ್ಲೆ ನಡೆಸಿದ ಘಟನೆಗಳೂ ನಡೆದಿವೆ ಎನ್ನಲಾಗುತ್ತಿದ್ದು ಹೇಮಾವತಿ ನದಿಯಲ್ಲಿ ಮರಳು ಗಣಿಗಾರಿಕೆಯ ಮಿತಿಮೀರಿರುವುದು ಪರಿಸರಕ್ಕೂ ಭಾರೀ ಹಾನಿಕಾರಕವಾಗಿದ್ದು ಈ ಬಗ್ಗೆ ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯ ಸಾರ್ವಜನಿಕ ವಲಯದಿಂದ ಕೇಳಿಬರುತ್ತಿದೆ.



### ಮರಳು ದಂಧೆಕೋರರಿಗೆ ಅಧಿಕಾರಿಗಳ ಶಾಕ್



ತಾಲ್ಲೂಕಿನ ಹ್ಯಾರಗಳಲೆ ಗ್ರಾಮ ಸಮೀಪ ಅಕ್ರಮವಾಗಿ ಸಂಗ್ರಹಿಸಿದ್ದ ಮರಳು ಗಣಿಗಾರಿಕೆ ಮೇಲೆ ದಾಳಿ ನಡೆಸಿದ ಅಧಿಕಾರಿಗಳು ದಂಧೆಕೋರರಿಗೆ ಬಿಗ್ ಶಾಕ್ ನೀಡಿದ್ದಾರೆ. ಅಧಿಕಾರಿಗಳ ದಿಢೀರ್ ದಾಳಿಯಿಂದ ಎಚ್ಚೆತ್ತ ಮರಳು ದಂಧೆಕೋರರು ಕಾಲ್ಕಿತ್ತರು. ಶನಿವಾರ ಸಂಜೆ ದಾಳಿ ನಡೆಸಿದ ಅಧಿಕಾರಿಗಳು ಅಪಾರ ಪ್ರಮಾಣದ ಮರಳು ಹಾಗು ಎರಡು ಬೋಟ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಹ್ಯಾರಗಳಲೆ ಗ್ರಾಮದ ಹೇಮಾವತಿ ನದಿ ತೀರದಲ್ಲಿ ಅಕ್ರಮವಾಗಿ ಮರಳು ದಾಸ್ತಾನು ಮಾಡಲಾಗಿತ್ತು. ವಿಷಯ ತಿಳಿದು ದಿಢೀರ್ ಭೇಟಿ ನೀಡಿದ ತಹಶೀಲ್ದಾರ್ ಪೂರ್ಣಿಮಾ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ ನಾಗರಾಜು, ಸಬ್ ಇನ್ಸಪೆಕ್ಟರ್ ಜನಾಬಾಯಿ ಅವರು ಮರಳು ಸಮೇತ ಎರಡು ಬೋಟ್‌ಗಳನ್ನು ಸುಪರ್ದಿಗೆ ಪಡೆದರು. ಅಕ್ರಮ ಮರಳು ದಂಧೆ ಬಗ್ಗೆ ಕನ್ನಡ ಪೋಸ್ಟ್ ಡಿಜಿಟಲ್ ಮಾಧ್ಯಮ ನಿರಂತರ ವರದಿ ಪ್ರಕಟಿಸಿತ್ತು.

IMPACT ಕನ್ನಡ ಪೋಸ್ಟ್ IMPACT

## ಕರು ಬಲಿ ಪಡೆದ ಚಿರತೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೆತ್ತೂರು: ಹೋಬಳಿಯ ಬ್ಯಾಗಡಿಹಳ್ಳಿ ಗ್ರಾಮದ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಕರುವನ್ನು ಚಿರತೆ ಬಲಿ ಪಡೆದಿದೆ.

ಗ್ರಾಮದ ಅಶ್ವಥ್ ಎಂಬುವರು ಗ್ರಾಮ ಹೊರವಲಯದಲ್ಲಿರುವ ತಮ್ಮ ಕೊಟ್ಟಿಗೆಯಲ್ಲಿ ಕರು ಕಟ್ಟಿದ್ದರು. ಶನಿವಾರ ಬೆಳಿಗ್ಗೆ ನೋಡಿದಾಗ ಚಿರತೆ ಕೊಂದು ಹಾಕಿರುವುದು ತಿಳಿದಿದೆ. ಗ್ರಾಮದ ಸುತ್ತಮುತ್ತ ಚಿರತೆ ಓಡಾಡುತ್ತಿರುವುದನ್ನು ನಾವು ನೋಡಿದ್ದೇವೆ. ಚಿರತೆಯೆ ದಾಳಿ ನಡೆಸಿರುವುದು ಖಚಿತವಾಗಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಈ ಕುರಿತು ಪ್ರತಿಕ್ರಿಯಿಸಿದ್ದು ಕರುವಿನ ಶವ ಪರೀಕ್ಷೆ ಮಾಡದೆ ಖಚಿತವಾಗಿ ಕರು ಚಿರತೆ ದಾಳಿಯಿಂದಲೆ ಮೃತಪಟ್ಟಿದೆ ಎಂದು ಹೇಳಲು ಸಾಧ್ಯವಿಲ್ಲ. ಮನೆಯವರು ಶವ ಪರೀಕ್ಷೆ ಮಾಡಿಸುವ ಮೊದಲೇ ಕರುವಿನ ಅಂತ್ಯಸಂಸ್ಕಾರ ಮಾಡಿದ್ದಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಹೆತ್ತೂರು ಪಿಕೆಪಿಎಸ್‌ನಲ್ಲಿ ಬಿಜೆಪಿ-ಜೆಡಿಎಸ್ ಪ್ರಾಬಲ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೆತ್ತೂರು: ಹೆತ್ತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ನಾಗಭೂಷಣ ಹಾಗೂ ಉಪಾಧ್ಯಕ್ಷರಾಗಿ ಬಿಜೆಪಿಯ ನೇತ್ರಾ ಸುರೇಶ್ ಅವಿರೋಧ ಆಯ್ಕೆಯಾಗಿದ್ದಾರೆ.

12 ನಿರ್ದೇಶಕರ ಬಲ ಹೊಂದಿರುವ ಪಿಕೆಪಿಎಸ್ ಆಡಳಿತ ಮಂಡಳಿ ಚುನಾವಣೆ ಇತ್ತೀಚೆಗೆ ನಡೆದಿತ್ತು. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಶನಿವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ನಾಗಭೂಷಣ ಹಾಗು ಉಪಾಧ್ಯಕ್ಷ ಸ್ಥಾನಕ್ಕೆ ನೇತ್ರಾ ಸುರೇಶ್ ಹೊರತುಪಡಿಸಿ ಮತ್ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆ ಘೋಷಿಸಲಾಯಿತು. ಸಹಕಾರ ಇಲಾಖೆ ಅಧಿಕಾರಿ ಮಂಜುನಾಥ್ ಚುನಾವಣೆ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.

ಮೊದಲ ಅವಧಿಗೆ ಜೆಡಿಎಸ್ ಬೆಂಬಲಿತರು ಅಧ್ಯಕ್ಷರಾದರೆ ಎರಡನೇ ಅವಧಿಗೆ ಬಿಜೆಪಿಯವರು ಅಧ್ಯಕ್ಷ ಪಟ್ಟ



ಅಲಂಕರಿಸಲಿದ್ದಾರೆ. ಮಾಜಿ ಶಾಸಕ ಹೆಚ್.ಕೆ. ಕುಮಾರಸಾಮಿ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಕೆ.ಎಲ್. ಸೋಮಶೇಖರ್, ಜೆಡಿಎಸ್ ಮುಖಂಡರಾದ ಉಜ್ಮಾರುಜ್ವಿ ಸುದರ್ಶನ್, ಸಚಿನ್ ಪ್ರಸಾದ್, ದಿವಾಕರ್, ಬೆಕ್ಕನಹಳ್ಳಿ ನಾಗರಾಜು, ವಳಲಹಳ್ಳಿ ರಾಜೇಗೌಡ, ಗ್ರಾ.ಪಂ. ಮಾಜಿ ಅಧ್ಯಕ್ಷ ಕೃಷ್ಣಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷ ಹಳ್ಳಿಬೈಲು ನಾಗರಾಜು, ಉಮೇಶ್ ಕುಮಾರ್, ನಿರ್ದೇಶಕರಾದ ಶ್ರೀಧರ್, ಕೃಷ್ಣಪ್ರಸಾದ್, ವೇದಮೂರ್ತಿ, ಪ್ರತಾಪ್, ಸತೀಶ್, ಮಲ್ಲೇಶ್, ದೀಪ್ತಿ, ರೋಹಿತ್, ಕುಶಾಲರಾಜು, ಚಂದ್ರಕುಮಾರ್ ಇತರರು ನೂತನ ಅಧ್ಯಕ್ಷ ಹಾಗು ಉಪಾಧ್ಯಕ್ಷರಿಗೆ ಅಭಿನಂದಿಸಿದರು.

## ನಿದ್ರೆ ಮಂಪರಿನಲ್ಲಿ ಪಲ್ಟಿಯಾದ ಕಾರು: ವ್ಯಕ್ತಿ ಸಾವು

ಚನ್ನರಾಯಪಟ್ಟಣ: ತಾಲ್ಲೂಕಿನ ಅಂಕೇಹಳ್ಳಿ ಸಮೀಪ ನಿದ್ರೆಯ ಮಂಪರಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಕಾರು ರಸ್ತೆ ಬದಿಯ ಜಮೀನಿನಲ್ಲಿ ಪಲ್ಟಿಯಾಗಿ ಒಬ್ಬ ಮೃತಪಟ್ಟು ಐದು ಜನರು ಗಾಯಗೊಂಡಿದ್ದಾರೆ. ಶಿವಮೊಗ್ಗ ಜಿಲ್ಲೆ ಭದ್ರಾವತಿಯ ಸುನಿಲ್ (34) ಮೃತರು. ಸೈಯದ್, ಮಂಜುನಾಥ, ಕಾರ್ತಿಕ್, ರಾಜೇಶ್, ಶ್ರೀನಿವಾಸರೆಡ್ಡಿ ಗಾಯಾಳುಗಳು. ಎಲ್ಲರೂ ಕನಕಪುರದ ಕಬ್ಬಾಳಮ್ಮ ದೇವಸ್ಥಾನಕ್ಕೆ ತೆರಳುತ್ತಿದ್ದರು. ಶನಿವಾರ ರಾತ್ರಿ 12.30ರ ಸಮಯದಲ್ಲಿ ಚಾಲಕ ರಾಜೇಶ್ ನಿದ್ರೆ ಮಂಪರಿನಲ್ಲಿ ರಸ್ತೆ ಬಿಟ್ಟು ಜಮೀನಿಗೆ ವಾಹನ ಇಳಿಸಿದ್ದಾನೆ. ಗಂಭೀರ ಗಾಯಗೊಂಡಿದ್ದ ಸುನಿಲ್ ಮೃತಪಟ್ಟಿದ್ದಾನೆ.

ಗಾಯಾಳುಗಳನ್ನು ಹಿಮ್ಸ್‌ಗೆ ದಾಖಲಿಸಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.




# ಯುವ ನಿಧಿ ಸ್ವಯಂ ದೃಢೀಕರಣ ಅವಧಿ ವಿಸ್ತರಣೆ

## ಜಿಲ್ಲೆಗೆ ಪ್ರತಿ ತಿಂಗಳು 7.50 ಕೋಟಿ ರೂ. ಹಣ

## ಪರಿಶೀಲನೆ ಹಂತದಲ್ಲಿ 99 ಅರ್ಜಿ


**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಯುವ ನಿಧಿ ಫಲಾನುಭವಿಗಳು ಪ್ರತಿ ತಿಂಗಳು ಸಲ್ಲಿಕೆ ಮಾಡುತ್ತಿದ್ದ ಸ್ವಯಂ-ದೃಢೀಕರಣ ಪ್ರಕ್ರಿಯೆಯನ್ನು ಒಂದು ತಿಂಗಳಿನಿಂದ ಮೂರು ತಿಂಗಳಿಗೆ ವಿಸ್ತರಿಸಿ ಸರ್ಕಾರ ಆದೇಶಿಸಿದ್ದು ಫಲಾನುಭವಿಗಳು ನಿರಾಳರಾಗಿದ್ದಾರೆ.

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಯುವ ನಿಧಿ ಜಾರಿಯಾಗಿ ಒಂದೂವರೆ ವರ್ಷ ಪೂರ್ಣಗೊಂಡಿದ್ದು 2023ರಲ್ಲಿ ಪದವಿ ಪೂರ್ಣಗೊಳಿಸಿದವರಿಗೆ ತಿಂಗಳಿಗೆ 3 ಸಾವಿರ ರೂ. ಹಾಗೂ ಡಿಪ್ಲೊಮಾ ಮುಗಿಸಿದವರಿಗೆ 1,500 ರೂ. ಸಂದಾಯವಾಗುತ್ತಿದೆ. ಆದರೆ ಫಲಾನುಭವಿಗಳು ಪ್ರತಿ ತಿಂಗಳ 12 ರಿಂದ 25ನೇ ತಾರೀಖಿನ ಒಳಗೆ ತಾವು ಯಾವುದೇ ಉದ್ಯೋಗ ಮಾಡುತ್ತಿಲ್ಲ, ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದಿಲ್ಲ ಎಂದು ಸೇವಾ ಸಿಂಧು ಪೋರ್ಟಲ್ ಮೂಲಕ ಸ್ವಯಂ ದೃಢೀಕರಣ ಸಲ್ಲಿಸಬೇಕಿತ್ತು. ಈ ಪ್ರಕ್ರಿಯೆಯಲ್ಲಿ ಸರ್ವರ್ ಸಮಸ್ಯೆಯಿಂದ ಅದು ಸಾಧ್ಯವಾಗುತ್ತಿರಲಿಲ್ಲ. ಅಂತಹ ವಿದ್ಯಾರ್ಥಿಗಳಿಗೆ ಯುವ ನಿಧಿ ತಲುಪದೆ ಭಾರೀ ತೊಂದರೆಯಾಗುತ್ತಿತ್ತು. ಜೊತೆಗೆ ಪ್ರತಿ ತಿಂಗಳು ಅದೇ ಕೆಲಸ ಪುನರಾವರ್ತನೆಯಾಗುತ್ತಿದ್ದರಿಂದ ಅದನ್ನು ಮೂರು ತಿಂಗಳಿಗೆ ವಿಸ್ತರಿಸಿ ಅನುಕೂಲ ಮಾಡಿಕೊಡಲಾಗಿದೆ.

**ತಿಂಗಳಿಗೆ 7.54 ಕೋಟಿ ರೂ**

ಜಿಲ್ಲೆಯಲ್ಲಿ 28,303 ಪದವೀಧರರು ಹಾಗೂ 328 ಡಿಪ್ಲೊಮಾ ಅಭ್ಯರ್ಥಿಗಳಿದ್ದಾರೆ. ಡಿಪ್ಲೊಮಾ ಪೂರ್ಣಗೊಳಿಸಿದವರಿಗೆ ಪ್ರತಿ ತಿಂಗಳು 27,42,000 ರೂ. ಹಣ ಸಂದಾಯವಾಗುತ್ತಿದ್ದು ಪದವೀಧರರಿಗೆ 7,26,72,000




ಸೇರಿ 7,54,14,000 ರೂ. ಹಣ ಯುವ ನಿಧಿ ಫಲಾನುಭವಿಗಳ ಖಾತೆಗೆ ಜಮೆಯಾಗುತ್ತಿದೆ.

**99 ಅರ್ಜಿಗಳು ಬಾಕಿ**

ಯುವ ನಿಧಿಗಾಗಿ ಅರ್ಜಿ ಸಲ್ಲಿಸಿದ 99 ಅಭ್ಯರ್ಥಿಗಳಿಗೆ ಈ ವರೆಗೆ ಹಣ ತಲುಪಿಲ್ಲ. ಎಲ್ಲಾ ಪ್ರಕ್ರಿಯೆ ಸೇವಾ ಸಿಂಧು ಪೋರ್ಟಲ್ ಮೂಲಕ ನಡೆಯುತ್ತಿದೆಯಾದರೂ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ದಾಖಲಾತಿಗಳ ಪರಿಶೀಲನೆ ನಡೆಯುತ್ತಿದೆ. ಹಣದ ಆಸೆಗಾಗಿ ಕೆಲವರು ನಕಲಿ ಅಂಕಪಟ್ಟಿ ಅಥವಾ ಇತರ ದಾಖಲಾತಿಗಳನ್ನು ಸಲ್ಲಿಸುವ ಸಾಧ್ಯತೆಯಿರುತ್ತದೆ. ಈ ರೀತಿ ಸಂಶಯದ ಅರ್ಜಿಗಳನ್ನು ತಡೆ ಹಿಡಿಯುವ ಅಧಿಕಾರಿಗಳು ಸಂಬಂಧಪಟ್ಟ ಅರ್ಜಿದಾರರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಅಗತ್ಯ ದಾಖಲೆಗಳನ್ನು ಕಚೇರಿಗೆ ಸಲ್ಲಿಸುವಂತೆ ಸೂಚನೆ ನೀಡುತ್ತಿದ್ದಾರೆ. ಎಲ್ಲಾ ದಾಖಲಾತಿಗಳು ಪಾರದರ್ಶಕವಾಗಿರುವ ಅಭ್ಯರ್ಥಿಗಳು ಕಚೇರಿಗೆ ಭೇಟಿ ನೀಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಇನ್ನು ನಕಲಿ ದಾಖಲಾತಿ ಸಲ್ಲಿಸಿದವರು ಕಚೇರಿಯತ್ತ ಸುಳಿಯುತ್ತಿಲ್ಲ. ಹೀಗಾಗಿ 99 ಅರ್ಜಿಗಳನ್ನು ಇನ್ನೂ ಪರಿಶೀಲನಾ ಹಂತದಲ್ಲಿವೆ.

**ಅರ್ಹರು ಯಾರು**

ಯುವನಿಧಿ ಯೋಜನೆಗೆ ಅರ್ಹರಾಗಬೇಕೆಂದರೆ 2023ನೇ ಸಾಲಿನಲ್ಲಿ ಪದವಿ ಅಥವಾ ಡಿಪ್ಲೊಮಾ ವ್ಯಾಸಂಗ ಪೂರ್ಣಗೊಳಿಸಿರಬೇಕು. ಅಭ್ಯರ್ಥಿಯು ಕನಿಷ್ಠ ಆರು ವರ್ಷ ಕರ್ನಾಟಕದಲ್ಲಿಯೇ ವ್ಯಾಸಂಗ ಮಾಡಿರಬೇಕು. ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ಹೊಂದಿರಬೇಕು. ಉನ್ನತ ವ್ಯಾಸಂಗ ಮಾಡಬಾರದು. ಸ್ವಯಂ ಉದ್ಯೋಗಕ್ಕಾಗಿ ಯಾವುದೇ ಬ್ಯಾಂಕ್‌ನಲ್ಲಿ ಸಾಲ ಪಡೆದಿರಬಾರದು. ಈ ಎಲ್ಲಾ ಅರ್ಹತೆಗಳಿರುವವರು ಅರ್ಜಿ ಸಲ್ಲಿಸಿದರೆ ಪ್ರತಿ ತಿಂಗಳು ಅವರ ಬ್ಯಾಂಕ್ ಖಾತೆಗೆ ಹಣ ಜಮೆಯಾಗಲಿದೆ.

ಬಡ ವಿದ್ಯಾರ್ಥಿಗಳು ವ್ಯಾಸಂಗ ಮುಗಿಸಿ ಉದ್ಯೋಗಕ್ಕಾಗಿ ಹುಡುಕಾಟ ನಡೆಸುತ್ತಿರುವಾಗ ಅಥವಾ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವವರಿಗೆ ಪುಸ್ತಕಗಳ ಖರೀದಿ, ಕೋಚಿಂಗ್‌ಗೆ ನೆರವಾಗಲಿ ಎಂಬ ಉದ್ದೇಶದಿಂದ ಯುವ ನಿಧಿ ಯೋಜನೆ ಜಾರಿಗೊಳಿಸಲಾಗಿದೆ. ಆದರೆ ಫಲಾನುಭವಿಗಳು ಉದ್ಯೋಗ ಕಂಡುಕೊಳ್ಳುವುದಕ್ಕಾಗಿಯೇ ಈ ಹಣವನ್ನು ಬಳಸಿಕೊಳ್ಳುತ್ತಿದ್ದಾರೆ ಎಂಬುದರ ಕುರಿತು ಪರಿಶೀಲನೆ ನಡೆಯುತ್ತಿಲ್ಲ. ಪದವಿ ಮುಗಿಸಿದ ಬಹುತೇಕ ಯುವಕ-ಯುವತಿಯರು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಅಥವಾ ಉದ್ಯೋಗಕ್ಕೆ ಹುಡುಕಾಟ ನಡೆಸುವುದಿಲ್ಲ. ಆದರೂ ಅವರಿಗೆ ಯುವ ನಿಧಿ ಹಣ ತಲುಪುತ್ತಿರುವುದು ಅನ್ಯ ಉದ್ದೇಶಕ್ಕೆ ಬಳಸುವಂತಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಗಂಭೀರ ಚಿಂತನೆ ನಡೆಸಬೇಕಿದೆ.

# ಕ್ರೀಡೆ ಉದ್ಯೋಗಕ್ಕೂ ಸಹಾಯಕ: ಕೃಷ್ಣೇಗೌಡ




ಹಾಸನ: ಕ್ರೀಡೆಗಳು ದೈಹಿಕ ಮಾನಸಿಕ ಆರೋಗ್ಯದ ಜೊತೆಗೆ ಉದ್ಯೋಗಕ್ಕೂ ಸಹಾಯಕವಾಗಿದೆ ಎಂದು ಗಂಡಸಿ ಪೊಲೀಸ್ ಠಾಣೆಯ ಸಬ್ ಇನ್ಸಪೆಕ್ಟರ್ ಕೃಷ್ಣೇಗೌಡ ಹೇಳಿದರು.

ನಗರದ ಪ್ರೈಡ್ ಕಾಲೇಜು ವತಿಯಿಂದ ಸಂಸ್ಥೆಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಅಂತರ್ ಕಾಲೇಜು ವಾಲಿಬಾಲ್ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿ, ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡಿದರೆ ಕ್ರೀಡಾ ಕೋಟಾದಡಿ ಉದ್ಯೋಗ ಗಿಟ್ಟಿಸಿಕೊಳ್ಳಬಹುದು. ತಾವು ಕೂಡ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ಗೆದ್ದವರು ಹಿಗ್ಗದೆ ಸೋತವರು ಕುಗ್ಗದೆ ಕ್ರೀಡೆಯಲ್ಲಿ ಪಾಲ್ಗೊಂಡು ಮುಂದಿನ ದಿನಗಳಲ್ಲಿ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆಗಳಲ್ಲಿ ಅತ್ಯುನ್ನತ ಸಾಧನೆ ಮಾಡುವಂತಾಲಿ ಎಂದು ಹಾರೈಸಿದರು.

ಪ್ರೈಡ್ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎ.ಎಲ್. ನವೀನ್ ಕುಮಾರ್ ಮಾತನಾಡಿ, ಎಲ್ಲಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿ ಸ್ಪರ್ಧೆಯಲ್ಲಿ ಗೆಲುವು ಮುಖ್ಯವಲ್ಲ. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದು ಮುಖ್ಯ. ಹೊರಾಂಗಣ ಕ್ರೀಡೆಗಳಲ್ಲಿ ಹೆಚ್ಚು ತೊಡಗಿಸಿಕೊಂಡರೆ ಮನುಷ್ಯನ ಆರೋಗ್ಯ ವೃದ್ಧಿಸುತ್ತದೆ ಎಂದು ತಿಳಿಸಿದರು.

ವಕೀಲ ನರೇಶ್, ಶಶಿಕುಮಾರ್, ನಂದೀಶ್, ರೂಪೇಶ್, ನಿತಿನ್, ರಘು, ದೈಹಿಕ ಶಿಕ್ಷಣ ಶಿಕ್ಷಕರಾದ ಪವನ್, ಪ್ರಕಾಶ್ ಇತರರಿದ್ದರು.

# ಮರದ ಎಲೆಗೆ ಬೆಂಕಿ 30 ಗಿಡಗಳಿಗೆ ಹಾನಿ



ಚನ್ನರಾಯಪಟ್ಟಣ: ಪಟ್ಟಣದ ಪ್ರವಾಸಿ ಮಂದಿರದ ಉದ್ಯಾನವನದ ಮರ, ತರಗು ಎಲೆಗಳು ಬೆಂಕಿ ಹಾಕಿದ್ದರಿಂದ ಸುಟ್ಟು ಕರಕಲಾಗಿವೆ.

ಕಳೆದ ಮೂರ್‍ನಾಲ್ಕು ವರ್ಷಗಳ ಹಿಂದೆ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಪರಿಸರ ಪ್ರೇಮಿ ಸಿ.ಎನ್. ಅಶೋಕ್ ಬೆಳಸಿದ ನೂರಾರು ಗಿಡಗಳು, 10 ರಿಂದ 12 ಅಡಿ ಎತ್ತರ ಬೆಳೆದಿದ್ದವು. ನೇರಳೆ, ಹೊಂಗೆ, ಮಾಗನೆ, ಮಹಾಗನಿ, ಆಕಾಶ ಮಲ್ಲಿಗೆ ಸೇರಿ ಹತ್ತಾರು ಜಾತಿಯ ಮರಗಳಿಂದ ಉದ್ಯಾನವರ ಹಸಿರಿನಿಂದ ಕಂಗೊಳಿಸುತ್ತಿತ್ತು.

ವಾಯು ವಿಹಾರಕ್ಕೆ ಬರುವ ಸಾರ್ವಜನಿಕರು, ಮರದಿಂದ ಬಿದ್ದ ಎಲೆಗಳನ್ನು ಗಮನಿಸಿ, ಅದಕ್ಕೆ ಬೆಂಕಿ ಹಾಕಿದ್ದಾರೆ. ಅದರಿಂದ 30ಕ್ಕೂ ಹೆಚ್ಚು ಮರಗಳು ಹಾನಿಗಿೀಡಾಗಿವೆ. ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ರುಕ್ಮಿಣಿ ಮಾತನಾಡಿ, ಗಿಡ ಮರ ಬೆಳೆಸುವುದು ನಮ್ಮ ಜವಾಬ್ದಾರಿ. ತ್ಯಾಜ್ಯಗಳ ಸಂಸ್ಕರಣೆ ಈ ರೀತಿ ಆಗಬಾರದು, ಈ ಕೃತ್ಯದಲ್ಲಿ ಭಾಗಿಯಾಗಿರುವವರಿಗೆ ಎಚ್ಚರಿಕೆ ನೀಡಲಾಗುವುದು ಎಂದರು. ಪರಿಸರ ಪ್ರೇಮಿ ಅಶೋಕ್ ಮಾತನಾಡಿ, ಪ್ರಜ್ಞಾವಂತರು ಗಿಡ ಮರಗಳ ಬಗ್ಗೆ, ಅವುಗಳನ್ನ ಉಳಿಸುವ ಬಗ್ಗೆ ತಾತ್ಸಾರ ತೋರಬಾರದು. ಏನನ್ನು ಬಯಸದ ಮರಗಳು, ಜೀವ ಸಂಕುಲಕ್ಕೆ ಅಷ್ಟೇ ಅಲ್ಲದೆ ಮನುಷ್ಯನಿಗೂ ಉಪಕಾರಿಯಾಗಿದೆ ಎಂದು ಹೇಳಿದರು.

# ಮಹಿಳೆಯರ ಮೇಲೆ ದೌರ್ಜನ್ಯ ಒಳ್ಳೆಯ ಬೆಳವಣಿಗೆಯಲ್ಲ




ಹಾಸನ: ಮಹಿಳೆಯರ ಮೇಲೆ ಹಿಂದಿನಿಂದ ನಡೆದುಕೊಂಡು ಬಂದಿರುವ ದೌರ್ಜನ್ಯ ಆಧುನಿಕ ದಿನಗಳಲ್ಲೂ ಮುಂದುವರೆಯುತ್ತಿರುವುದು ವಿಷಾದನೀಯ ಎಂದು ಸಾಹಿತಿ ಶೈಲಜಾ ಹಾಸನ ಹೇಳಿದರು.

ನಗರದ ಎಂ.ಕೃಷ್ಣ ಕಾನೂನು ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿ, ಮಹಿಳೆಯರ ವಿಚಾರದಲ್ಲಿ ಇನ್ನೂ ಕ್ರೂರತ್ವ ವಿಜೃಂಭಿಸುತ್ತಿದೆ. ಇತಿಹಾಸ ಪೂರ್ವದಿಂದಲೂ ಮಹಿಳಾ ದೌರ್ಜನ್ಯ ನಿರಂತರವಾಗಿ ನಡೆದುಬಂದಿದೆ. ಇನ್ನೂ ನಿಂತಿಲ್ಲವೆಂದು ಬೇಸರ ವ್ಯಕ್ತಪಡಿಸಿದರು. ಸಮಾಜ ಷ್ಟೇ ಬದಲಾದರೂ ಪುರುಷ ಪ್ರಧಾನ ಮನೋಭಾವ ವಿಜೃಂಭಿಸುತ್ತಿರುವುದರಿಂದ ಹೆಣ್ಣು ಮಕ್ಕಳನ್ನು ಸಮಾನವಾಗಿ ನೋಡುವ ಪರಿಸ್ಥಿತಿ ನಿರ್ಮಾಣವಾಗಬೇಕು. ಮಹಿಳೆಯ ಮೇಲೆ ನಡೆಯುವ ಶೋಷಣೆ ಹೋಗಲಾಡಿಸಲು ಭಾರತ ಸೇರಿ ವಿಶ್ವದಲ್ಲಿ ಅನೇಕ ಹೋರಾಟಗಳು ನಡೆದಿವೆ. ಭಾರತದಲ್ಲಿ ರಾಜಾರಾಮ್ ಮೋಹನ್ ರಾಯ್, ಸಾವಿತ್ರಿಬಾಯಿಪುಲೆ ಅವರಂತ ದಿಗ್ಗಜರು ಮಹಿಳೆಯರ ಪರ ಹೋರಾಡಿದ್ದಾರೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ವಿ.ಶ್ರೀನಿವಾಸ ಮಾತನಾಡಿ, ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಹಕ್ಕುಗಳಿಗಾಗಿ ಅನೇಕ ಹೋರಾಟಗಳು ನಡೆದಿವೆ. ಈ ಪಿಡುಗು ಹೋಗಲಾಡಿಸಲು ಪ್ರಥಮವಾಗಿ ಅಮೇರಿಕಾದ ನ್ಯೂಯಾರ್ಕ್‌ನಲ್ಲಿ 1909ರಲ್ಲಿ ಪ್ರಥಮವಾಗಿ ಮಹಿಳಾ ದಿನಾಚರಣೆ ಆಚರಿಸಲಾಯಿತು. ನಂತರ ಮಾರ್ಚ್ 1922 ರಲ್ಲಿ ಮಹಿಳಾ ದಿನಾಚರಣೆ ಜಾರಿಯಾಯಿತು. ಇದನ್ನು 1977ರಲ್ಲಿ ಅಂತಾರಾಷ್ಟ್ರೀಯ ಒಕ್ಕೂಟವು ಅಂಗೀಕರಿಸಿದೆ. ಎಲ್ಲಾ ವರ್ಗದಲ್ಲೂ ಮಹಿಳೆಯರನ್ನು ಸಮಾನವಾಗಿ ಕಾಣಬೇಕು, ಹೆಣ್ಣು ತಾಯಿಯಾಗಿ ಗೃಹಿಣಿಯಾಗಿ ಪೂಜನೆಯ ಸ್ಥಾನ ಪಡೆದಿದ್ದಾಳೆ ಎಂದರು.

# ಏ. 1ಕ್ಕೆ ಸಿದ್ದಗಂಗಾ ಶ್ರೀಗಳ ಜನ್ಮ ದಿನೋತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತ್ರಿವಿಧ ದಾಸೋಹಿ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 118ನೇ ಜನ್ಮ ದಿನವನ್ನು ಪಟ್ಟಣದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಭವನದಲ್ಲಿ ಏ. 1 ರಂದು ಆಯೋಜಿಸಲಾಗಿದೆ ಎಂದು ತಾಲ್ಲೂಕು ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಅಡಗೂರು ಬಸವರಾಜು ಹೇಳಿದರು.

ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಅರ್ಥಪೂರ್ಣ ಕಾರ್ಯಕ್ರಮಕ್ಕೆ ಅಖಿಲ ಭಾರತ ವೀರಶೈವ ಮಹಾಸಭಾ, ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಟ್ರಸ್ಟ್, ತಾಲ್ಲೂಕು ಶರಣ ಸಾಹಿತ್ಯ ಪರಿಷತ್, ನಗರ ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ಟ್ರಸ್ಟ್, ತಾಲ್ಲೂಕು ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ, ವೀರಶೈವ ಪುರೋಹಿತ ಕ್ಷೇಮಾಭಿವೃದ್ಧಿ ಟ್ರಸ್ಟ್ ಸಹಕಾರ ನೀಡುತ್ತವೆ ಎಂದರು.

ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ಶಾಸಕ ಎಚ್.ಕೆ. ಸುರೇಶ್, ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್ ಮಾತನಾಡಿ, ಜಿಲ್ಲಾ ಘಟಕದ ಕಚೇರಿ ಉದ್ಘಾಟನೆ ಕಾರ್ಯಕ್ರಮ ಏ. 4ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಹಾಸನದ ತಣ್ಣೀರುಹಳ್ಳ ಮಠದಲ್ಲಿ ನೆರವೇರಲಿದೆ ಎಂದರು.

ಮಾಜಿ ಅಧ್ಯಕ್ಷ ಸಿ.ಎಂ. ನಿಂಗರಾಜ್, ಬಲ್ಲೇನಹಳ್ಳಿ ರವಿಕುಮಾರ್, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಪ್ರಧಾನ ಕಾರ್ಯದರ್ಶಿ ಮದನ್ ಬಳ್ಳೂರು, ಖಜಾಂಚಿ ಕೊರಟಿಕೆರೆ ರಾಜಣ್ಣ, ಜಿಲ್ಲಾ ಕಾರ್ಯದರ್ಶಿ ರವಿಕುಮಾರ್ ಮತ್ತಿತರರಿದ್ದರು.

# ದಮ್ಮನಿಂಗಲ ಪಿಕೆಪಿಎಸ್‌ಗೆ ಕೃಷ್ಣೇಗೌಡ ಅಧ್ಯಕ್ಷ

ಚನ್ನರಾಯಪಟ್ಟಣ: ತಾಲ್ಲೂಕಿನ ದಮ್ಮನಿಂಗಲ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕೃಷ್ಣೇಗೌಡ ಅವಿರೋಧ ಆಯ್ಕೆಯಾದರು.

ದಮ್ಮನಿಂಗಲ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬಂದಿದ್ದು 11 ಮಂದಿ ಆಡಳಿತ ಮಂಡಳಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ, ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕೃಷ್ಣೇಗೌಡ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಹೇಮಚಂದ್ರ ಘೋಷಣೆ ಮಾಡಿದರು.

ನೂತನ ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿ, ಕೃಷಿ ಪತ್ತಿನ ಸಹಕಾರ ಸಂಘದ ವ್ಯಾಪ್ತಿಗೆ ಏಳು ಗ್ರಾಮಗಳಿದ್ದು ಸುಮಾರು 803 ರೈತರಿಗೆ 5.17 ಕೋಟಿ ಬೆಳೆ ಸಾಲ ನೀಡಲಾಗಿದೆ. 30ಕ್ಕೂ ಹೆಚ್ಚು ಸ್ತ್ರೀ ಶಕ್ತಿ ಹಾಗೂ ಸ್ವಸಾಯ ಸಂಘಗಳಿಗೆ 91 ಲಕ್ಷ ರೂ. ಸಾಲ ನೀಡಲಾಗಿದೆ ಎಂದರು.

ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕ, ಶಾಸಕ ಸಿ.ಎನ್. ಬಾಲಕೃಷ್ಣ ಕೃಷಿ ಪತ್ತಿನ ಸಹಕಾರ ಸಂಘದ ಮೂಲಕ ರೈತರಿಗೆ ಸಾಕಷ್ಟು ಅನುಕೂಲ ಕಲ್ಪಿಸಿದ್ದಾರೆ. ಬೆಳೆ ಸಾಲದ ಜೊತೆಯಲ್ಲಿ ಸಂಘದಲ್ಲಿ ರಸಗೊಬ್ಬರ ವಿತರಣೆ, ಪಡಿತರ ಆಹಾರ ವಿತರಣೆ ಮಾಡುವುದಲ್ಲದೆ ಪಹಣಿಯನ್ನು ನೀಡುವ ಮೂಲಕ ಸ್ಥಳಿಯವಾಗಿ ರೈತರಿಗೆ ಅನುಕೂಲ ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

ದಮ್ಮನಿಂಗಲ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷೆ ಜಯಮ್ಮ, ನಿರ್ದೇಶಕರಾದ ಕೇಶವ, ಮರಿಯಪ್ಪ, ನಾಗರಾಜು, ಮಂಜುನಾಥ್, ಶಿವಕುಮಾರ್, ಅಣ್ಣಯ್ಯ, ಕುಮಾರ್, ತಾರಾ, ಭಾಗ್ಯಮ್ಮ, ಜಿಲ್ಲಾ ಸಹಕಾರ ಬ್ಯಾಂಕ್ ಮೇಲ್ವಿಚಾರಕ ಮಧು, ಸಂಘದ ಸಿಇಒ ಮಂಜೇಗೌಡ,

ಮುಖಂಡರಾದ ಎಲ್ಐಸಿ ಶಿವಾನಂದ್, ನಾಗರಾಜು, ಸತೀಶ್, ರವೀಶ್, ಶ್ರೀನಿವಾಸ್, ಪರಮೇಶ್, ಸ್ವಾಮಿ, ಮಂಜೇಗೌಡ ಇತರರಿದ್ದರು.

# ಸಾಲಗಾರರ ಕಿರುಕುಳ: ಪ್ರತ್ಯೇಕ ಪ್ರಕರಣದಲ್ಲಿ ಇಬ್ಬರು ಸಾವು

ಹಾಸನ: ಕ್ರಿಕೆಟ್ ಬೆಟ್ಟಿಂಗ್, ಫೈನಾನ್ಸ್ ಕಿರುಕುಳ ಹಾಗೂ ಬಡ್ಡಿ ಸಾಲಗಾರರ ಹಿಂಸೆ ತಾಳಲಾರದೆ ಪ್ರತ್ಯೇಕ ಪ್ರಕರಣದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ತಾಲ್ಲೂಕಿನ ಅಟ್ಟಾವರ ಗ್ರಾಮದ ಸ್ವರೂಪ್ (40) ಎಂಬುವವರು ಮನೆಯಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಅಪಘಾತದಲ್ಲಿ ಕಾಲು ಕಳೆದುಕೊಂಡಿದ್ದ ವ್ಯಕ್ತಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಗುರುವಾರ ಮಧ್ಯಾಹ್ನ ಮನೆಯ ಬಾತ್ ರೂಂನಲ್ಲಿ ಮೃತದೇಹ ಪತ್ತೆಯಾಗಿದೆ. ಆತನ ಜೇಬಿನಲ್ಲಿ ಡೆತ್ ನೋಟ್ ಸಿಕ್ಕಿದೆ. ಹಿರೋ ಪಿನ್ ಕಾರ್ಪ್‌ನಲ್ಲಿ ಸಾಲ ಮಾಡಿದ್ದೆ. ಅದನ್ನು ತೀರಿಸದ ಹಿನ್ನಲೆಯಲ್ಲಿ ಪದೆ ಪದೇ ಕರೆ ಮಾಡಿ ಹಿಂಸೆ ನೀಡುತ್ತಿದ್ದಾರೆ.

ಜೊತೆಗೆ ಬೆಂಗಳೂರಿನ ಶ್ರೀ ಲಕ್ಷ್ಮಿ ರೋಡ್ ಟ್ರಾನ್ಸ್‌ಪೋರ್ಟ್‌ನಲ್ಲಿ ಕೆಲಸ ಮಾಡುವ ಅನ್ಸಾರ್, ತಿಪ್ಪೆಸ್ವಾಮಿ ಹಾಗೂ ಬಾಳಪ್ಪ ಎಂಬುವವರು ಕ್ರಿಕೆಟ್ ಬೆಟ್ಟಿಂಗ್‌ಗೆ ಹಣ ಕಟ್ಟಿಸಿ ಮೋಸ ಮಾಡಿದ್ದಾರೆ ಎಂದು ಬರೆದಿದ್ದಾನೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಸಾಲಗಾರರ ಕಿರುಕುಳ ತಾಳಲಾರದೆ ಕ್ರಿಮಿನಾಶಕ ಔಷಧ ಸೇವಿಸಿದ್ದ ಮಹಿಳೆ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿರುವ ಘಟನೆ ಹೊಳೆನರಸೀಪುರ ರಸ್ತೆಯ ಆರ್.ಟಿ. ನಗರದಲ್ಲಿ ನಡೆದಿದೆ. ಶಾಂತಮ್ಮ ಅವರ ಪುತ್ರಿ ವನಿತಾ (39) ಮೃತರು. ಶ್ರೀರಾಮ ನಗರದ ಪರಮೇಶ್ ಅವರಿಂದ 1 ಲಕ್ಷ ರೂ., ಲತಾ ಅವರಿಗೆ 70 ಸಾವಿರ ರೂ. ಹಾಗು ಹೊಳೆನರಸೀಪುರದ ರುಕ್ಮಿಣಿ ಅವರಿಂದ 50 ಸಾವಿರ ರೂ. ಸಾಲ ಪಡೆದಿದ್ದರು. ವನಿತಾ ಅವರು ಪ್ರತಿವಾರ ಬಡ್ಡಿಯನ್ನು ನಿಯಮಿತವಾಗಿ ಕಟ್ಟುತ್ತಿದ್ದರು.

ಆದರೆ ಕಳೆದ ನಾಲ್ಕು ತಿಂಗಳಿಂದ ಬಡ್ಡಿ ಪಾವತಿಸಲು ಸಾಧ್ಯವಾಗದ ಹಿನ್ನಲೆಯಲ್ಲಿ ಸಾಲಗಾರರೆಲ್ಲರೂ ಮನೆಗೆ ಬಂದು ಗಲಾಟೆ ಮಾಡುತ್ತಿದ್ದರು. ಬಡ್ಡಿ ಹಾಗೂ ಅಸಲನ್ನು ಕೂಡಲೇ ಕೊಡಬೇಕು ಇಲ್ಲವಾದರೆ ಚೆಕ್ ಬೌನ್ಸ್ ಪ್ರಕರಣ ದಾಖಲಿಸುವುದಾಗಿ ಹೆದರಿಸುತ್ತಿದ್ದರು. ಅದರಿಂದ ಮನನೊಂದ ವನಿತಾ ಮಾ. 18 ರಂದು ಮಹಾರಾಜ ಪಾರ್ಕ್‌ನಲ್ಲಿ ಕ್ರಿಮಿನಾಶಕ ಸೇವಿಸಿದ್ದರು. ಸಾರ್ವಜನಿಕರು ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಗುರುವಾರ ಮೃತಪಟ್ಟಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಲಾರಿ ಡಿಕ್ಕಿ: ಬೈಕ್ ಸವಾರ ಸಾವು

ಹಾಸನ: ಲಾರಿ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಅತ್ತಿಹಳ್ಳಿ ಸಮೀಪ ನಡೆದಿದೆ.

ಅತ್ತಿಹಳ್ಳಿ ಗ್ರಾಮದ ಸ್ವಾಮಿ (43) ಮೃತರು. ಗುರುವಾರ ರಾತ್ರಿ 8.30ರ ಸಮಯದಲ್ಲಿ ಹಾಸನದಿಂದ ಊರಿಗೆ ಹೋಗುತ್ತಿದ್ದಾಗ ಬೇಲೂರು ಕಡೆಯಿಂದ ಬಂದ ಲಾರಿ ಡಿಕ್ಕಿಯಾಗಿದೆ. ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 28 ಸಾವಿರ ರೂ. ಮೌಲ್ಯದ ಗಾಂಜಾ ವಶ

ಅರಸೀಕೆರೆ: ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರನ್ನು ಬಂಧಿಸಿರುವ ನಗರ ಠಾಣೆ ಪೊಲೀಸರು 28 ಸಾವಿರ ರೂ. ಮೌಲ್ಯದ 238 ಗ್ರಾಂ ತೂಕದ ಅಮಲು ಪದಾರ್ಥ ವಶಪಡಿಸಿಕೊಂಡಿದ್ದಾರೆ.

ನಗರದ ಗಿರೀಶ್, ಬೈರನಾಯ್ಕನಹಳ್ಳಿ ಗ್ರಾಮದ ವರುಣ್ ಹಾಗು ಅಪ್ರಾಪ್ತನನ್ನು ವಶಕ್ಕೆ ಪಡೆದಿದ್ದಾರೆ. ರೈಲ್ವೆ ಸ್ಟೇಷನ್ ಪಾರ್ಕ್ ಹತ್ತಿರ ಗಾಂಜಾ ಮಾರಾಟ ಮಾಡುತ್ತಿದ್ದಾಗ ದಾಳಿ ನಡೆಸಿದ ಪೊಲೀಸರು 238 ಗ್ರಾಂ ಗಾಂಜಾ ಸುಪರ್ದಿಗೆ ಪಡೆದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಯುಗ ಮತ್ತು ಆದಿಯೇ ಯುಗಾದಿ

**– ವಿಶ್ವಾಸ್ ಡಿ. ಗೌಡ, ಸಕಲೇಶಪುರ**

ದಕ್ಷಿಣ ಭಾರತದಲ್ಲಿ ಚಂದ್ರನ ಚಲನೆಯನ್ನು ಗುರುತಿಸಿ ಚಂದ್ರಮಾನ ಯುಗಾದಿ ಆಚರಿಸುತ್ತಾರೆ. ಸೂರ್ಯ ಮೇಷ ರಾಶಿಗೆ ಬಂದಾಗ ಸೌರಮಾನ ಯುಗಾದಿ ಆಚರಿಸುತ್ತಾರೆ ಇದನ್ನು ಉಡುಪಿ ಮಂಗಳೂರು ಕಡೆ ಉತ್ತರ ಭಾರತದ ಹಲವು ಕಡೆಗಳಲ್ಲಿ ಸೌರಮಾನ ಯುಗಾದಿ ಆಚರಿಸುತ್ತಾರೆ.

ಈ ವರ್ಷ ಶ್ರೀ ಶೋಭಕೃತ್ ನಾಮ ಸಂವತ್ಸರ, ಚೈತ್ರ ಮಾಸ, ಶುಕ್ಲ ಪಕ್ಷ, ಪಾಡ್ಯ ದಿನ, ಯುಗಾದಿ ಹಬ್ಬವನ್ನು ವಸಂತ ಋತುವಿನ ಆರಂಭದೊಂದಿಗೆ ಆಚರಿಸುತ್ತಾರೆ. ಪ್ರತಿ ಹಬ್ಬ ಹುಣ್ಣಿಮೆಗಳನ್ನು ಪ್ರಕೃತಿಯನ್ನು ಮೂಲವಾಗಿ ಟ್ಟುಕೊಂಡು ಆಚರಿಸುವುದರಿಂದ ಹಬ್ಬಗಳು ವಿಶೇಷವಾಗುತ್ತದೆ.

ಯುಗಾದಿ ಹಬ್ಬದ ಪೌರಾಣಿಕ ಹಿನ್ನೆಲೆಯು ಈ ರೀತಿ ಇದೆ. ಬ್ರಹ್ಮನು ಜಗತ್ತನ್ನು ಸೃಷ್ಟಿ ಮಾಡಿದ ದಿನವೆಂದು, ಶ್ರೀ ರಾಮಚಂದ್ರನು ರಾವಣನ ಮೇಲೆ ಜಯ ಸಾಧಿಸಿ ಕಷ್ಟದ ದಿನಗಳನ್ನೆಲ್ಲ ಕಳೆದು ಸೀತಾಮಾತೆ, ಲಕ್ಷ್ಮಣನೊಂದಿಗೆ ಸಂತೋಷದಿಂದ ಅಯೋಧ್ಯೆಗೆ ಬಂದ ದಿನವೆಂದು ಹಾಗೂ ಸೋಮಕಾಸುರ ಎಂಬ ರಾಕ್ಷಸನು ವೇದಗಳನ್ನು ಚಾಪೆಯಂತೆ ಸುತ್ತಿ ಕದ್ದೊಯ್ದು ಸಾಗರದ ಆಳದಲ್ಲಿ ಮುಚ್ಚಿಟ್ಟದ್ದರಿಂದ ಮಹಾವಿಷ್ಣು ತನ್ನ ಮೊದಲ ಅವತಾರವಾದ ಮತ್ಸ್ಯಾವತಾರದಲ್ಲಿ ಹೋಗಿ ಆ ವೇದಗಳನ್ನು ತಂದು ಬ್ರಹ್ಮನಿಗೆ ಕೊಟ್ಟ ದಿನವೆಂದು, ಆನಂತರ ಬ್ರಹ್ಮನು ಸೃಷ್ಟಿ ಕಾರ್ಯ ಆರಂಭ ಮಾಡಿದನೆಂದು, ಇಂಥ ಹಲವು ಶುಭಾರಂಭಗಳಿಂದ ಟಿಯುಗಾದಿಟಿ ಆಚರಣೆ ಬಂದಿದೆ ಎಂದು ತಿಳಿಸಲಾಗಿದೆ.

ಹಿಂದೂಗಳಿಗೆ ವರ್ಷದಲ್ಲಿ ಬರುವ ಮೂರುವರೆ ದಿನಗಳು ಬಹಳ ಮುಖ್ಯವಾದವು ಯುಗಾದಿ, ದೀಪಾವಳಿ, ವಿಜಯದಶಮಿ, ಅಕ್ಷಯ ತದಿಗೆಯ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರ್ಧ ದಿನ ಈ ಮೂರುವರೆ ದಿನಗಳು. ಮೂರುವರೆ ವಜ್ರದಷ್ಟೇ ಪವಿತ್ರವಾದ ದಿನ. ನಾವು ಉತ್ಸವ ಪ್ರಿಯರು, ನಾವು ಸಂತೋಷವಾಗಿರಲು ಶ್ರಮಿಸುತ್ತೇವೆ. ಅದಕ್ಕಾಗಿ ಹಬ್ಬ ಹರಿದಿನಗಳು, ಹೊಸ ಉಡುಗೆ ತೊಡುಗೆ ಆಭರಣ, ಸಿಹಿ ಭಕ್ಷ ಭೋಜ್ಯಗಳ ಭೋಜನ ಸವಿಯಲು ಸಿದ್ಧರಾಗಿರುತ್ತೇವೆ. ನಮಗೆ ನಮ್ಮ ಪೂರ್ವಿಕರಿಂದ ಬಂದಂಥ ಕೊಡುಗೆಯಾಗಿದೆ. ಪೂರ್ವ ಕಾಲದಲ್ಲಿದ್ದ ಋಷಿ ಮುನಿಗಳೆಲ್ಲ, ಭಾರತದಲ್ಲಿ ಪರ್ವತ ತಪ್ಪಲುಗಳಲ್ಲಿ, ನದಿ ತೀರಗಳಲ್ಲಿ, ಕುಟೀರಗಳನ್ನು ಕಟ್ಟಿಕೊಂಡು ತಪಸ್ಸನ್ನು ಆಚರಿಸುತ್ತಿದ್ದರು. ಅಂಥ ಮಹಾಮಹಿಮರ ಋಷಿಮುನಿಗಳ ಆಶೀರ್ವಾದ ಪಡೆಯಲು ದೇವಲೋಕದಿಂದ ಇಂದ್ರಾದಿ ದೇವತೆಗಳು, ನವಗ್ರಹಗಳು, ಅಷ್ಟದಿಕ್ಪಾಲಕರು ಬರುತ್ತಿದ್ದರು. ಭೂಮಿಯ ಜೊತೆ ಅವರು ಸಂಪರ್ಕ ಇಟ್ಟುಕೊಂಡಿದ್ದರು. ಆದುದರಿಂದ ನಮ್ಮ ಭಾರತ ಕರ್ಮಭೂಮಿ, ದೇವಭೂಮಿ, ಇಂದ್ರಾದಿ ದೇವತೆಗಳು, ಗಂಧರ್ವರು ಯಕ್ಷರು, ನಾಗರು, ಕಿನ್ನರು ಹಾಗೂ ದೇವ ಲೋಕದ ಸ್ತ್ರೀಯರಿಗೆ ವಿಹಾರ ಭೂಮಿ ಆಗಿದೆ.

ಯುಗಾದಿ ಪವಿತ್ರವಾದ ದಿನ, ನಮಗೆ ಎರಡು ಶಕೆಗಳಿವೆ, ಶಾಲಿವಾಹನ ಶಕೆ ವಿಕ್ರಮ ನಾಮಶಕೆ, ಎರಡು ರೀತಿಯ ಶಕೆಗಳನ್ನು ಉಪಾಸನೆ ಮಾಡುತ್ತೇವೆ. ದಕ್ಷಿಣ ಭಾರತದಲ್ಲಿ ಶಾಲಿವಾಹನ ಶಕೆ ಆಚರಣೆ ಇದ್ದರೆ ಉತ್ತರ ಭಾರತದ ಕಡೆ ವಿಕ್ರಮನಾಮಶಕೆ ಆಚರಿಸುತ್ತಾರೆ. ನಾವು ಸಂಕಲ್ಪ ಮಾಡು ವಾಗ, ಪ್ರವರದಲ್ಲಿ ಟಿಶುಭೆ -ಶೋಭನೇ-ಮುಹೂರ್ತೇ ಆದ್ಯ ಬ್ರಹ್ಮಣ ದ್ವಿತೀಯ ಪರಾರ್ಧೇ-ಶ್ವೇತ ವರಾಹ ಕಲ್ಪೇ -ವೈವಸ್ವತ ಮನ್ವಂತರೇ- ಕಲಿಯು ಗೇ, ಪ್ರಥಮಪಾದೇ, ಜಂಬೂದ್ವೀಪೇ, ಭಾರತವರ್ಷೇ, ಭರತಖಂಡೇ, ದಂಡ ಕಾರಣ್ಯೇ, ಗೋದಾವರ್ಯಾ: ದಕ್ಷಿಣ ತೀರೇ, ಶಾಲಿವಾಹನಶಕೇ, ಬೌದ್ಧಾವತಾರೇ, ರಾಮ ಕ್ಷೇತ್ರೇ ಅಸ್ಮಿನ್ ವರ್ತಮಾನೇ ವ್ಯವಹಾರಿಕೇ ಚಾಂದ್ರಮಾನೇನ ಪ್ರಭವಾದಿ ಷಷ್ಠಿಸಂವತ್ಸರೇ, ಈ ರೀತಿ ಸಂಕಲ್ಪ ಪ್ರವರಗಳಲ್ಲಿ ಪೂಜೆ ಶುಭ ಕಾರ್ಯಗಳಲ್ಲಿ ಹೇಳಿಕೊಂಡೇ ಮಾಡುತ್ತೇವೆ. ಮೊದಲ ಐತಿಹಾಸಿಕ ಸಾಮ್ರಾಜ್ಯದ ಅರಸ ಟಿಶಾಲಿವಾಹನಟಿ ತನ್ನ ಆಡಳಿತಾವಧಿಯಲ್ಲಿ ಧರ್ಮವನ್ನು ರಕ್ಷಣೆ ಮಾಡಿ ಸನಾತನ ಧರ್ಮವನ್ನು ಸ್ಥಾಪನೆ ಮಾಡಿದಂಥ ಮಹಾಪುರುಷ.

ಶಾತ ಎಂದರೆ ಕುದುರೆ ಎಂದು ಕುದುರೆಯನ್ನು ವಾಹನವಾಗಿ ಉಳ್ಳವರೆಂದು ಹೇಳುತ್ತಾರೆ. ಶಾತವಾಹನರು ಬ್ರಾಹ್ಮಣ ಜಾತಿಗೆ ಸೇರಿದ್ದು, ವಿಷ್ಣು ಮತ್ತು ಮತ್ಸ್ಯ ಪುರಾಣಗಳಲ್ಲಿ ಮಾಹಿತಿ ದೊರೆಯುತ್ತದೆ.

ಕಾಲಮಾನ ತಿಳಿಯಲು ಬ್ರಹ್ಮನು ನಮಗೆ ಪಂಚಾಂಗ ಮಾಡಿಕೊಟ್ಟ ದಿನವೇ ಯುಗಾದಿಯಾಗಿದೆ. ಮಹಾಭಾರತದ ಕಾಲದಲ್ಲೂ ಶ್ರೀ ಕೃಷ್ಣ ಯುಗಾದಿ ಹಬ್ಬದ ಆಚರಣೆ ಮಾಡಿದ್ದನು. ಜೀವನದಲ್ಲಿ ಬರುವ ಕಷ್ಟ ಸುಖಗಳನ್ನು ಸಮಪ್ರಮಾಣದಲ್ಲಿ ಸ್ವೀಕರಿಸಬೇಕೆಂದು ಬೇವು ಬೆಲ್ಲವನ್ನು ಭಗವಂತನಿಗೆ ಅರ್ಪಿಸಿ ಸೇವನೆ ಮಾಡಿ ಸಂತೋಷದಿಂದ ಹಬ್ಬವನ್ನು ಆಚರಿಸಿದರೆ ಆ ವರ್ಷವೆಲ್ಲ ಎಂತಹದೇ ಕಷ್ಟ ಬರಲಿ ಧೃತಿಗೆಡದೆ ಎದುರಿಸಿ ಸಂತೋಷದಿಂದ ಇರುತ್ತಾರೆ ಎಂಬುದು ಟಿಯುಗಾದಿಟಿ ಆಚರಣೆಯ ಪ್ರಮುಖ ಉದ್ದೇಶವಾಗಿದೆ. ಹಬ್ಬದ ದಿನ ಮುಂಜಾನೆ ಎಣ್ಣೆ ಹಚಿಚ್ಚಕೊಂಡು ಅಭ್ಯಂಗನ ಸ್ನಾನ ಮಾಡಬೇಕು. ಎಣ್ಣೆ ಲಕ್ಷ್ಮಿಯಾದರೆ, ನೀರು ಗಂಗೆ, ಹೊಸ ಬಟ್ಟೆ ಧರಿಸಿ ಮನೆಯಲ್ಲಿ ಹಿರಿಯರು ಮಾಡುವ ಪೂಜೆಗಳಲ್ಲಿ ಭಾಗಿಯಾಗಿ ತೀರ್ಥ ಪ್ರಸಾದ ಸೇವನೆ ಮಾಡಿ, ಸುಗ್ರಾಸ ಭೋಜನವನ್ನು ಸವಿದು ಆನಂದದಿಂದ ಕಳೆಯುತ್ತಾರೆ. ಪಂಚಾಂಗ ಶ್ರವಣ ಕೇಳುವುದು ಪ್ರಮುಖ ಉದ್ದೇಶ. ಈ ರೀತಿ ಹಬ್ಬದ ಆಚರಣೆಯನ್ನು ಮಾಡುತ್ತಾರೆ.

ಯುಗಾದಿಯಂದು ಬೇವು ಬೆಲ್ಲ ಕೊಡುವಾಗ ಸ್ತೋತ್ರವನ್ನು ಹೇಳುತ್ತಾರೆ.

ಶತಾಯುರ್ವಜ್ರ ದೇಹಾಯ ಸರ್ವ ಸಂಪತ್ಕರಾಯ ಚ
ಸರ್ವಾರಿಷ್ಟ ವಿನಾಶಾಯ ನಿಂಬಕಂದಲ ಭಕ್ಷಣಮ್ !!
ನೂರು ವರ್ಷಗಳ ಕಾಲ ವಜ್ರದೇಹಿಯಾಗಿರಲು,
ಸರ್ವ ಸಂಪತ್ತುಗಳನ್ನು ಪಡೆಯಲು ಮತ್ತು ಸಕಲ ಅನಿಷ್ಟ ನಿವಾರಣೆಗಾಗಿಯೂ
ಬೇವಿನ ಹೊಸ ಚಿಗುರನ್ನು ತಿನ್ನಬೇಕು!!

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248